OS No. 55/2024

PW-1

**(ಇಂದು ದಿಃ 03-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ. NR ವಕೀಲರಿಂದಃ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

- ಅಸಲು ದಾವಾ ನಂಬರ 124/1999 ರಲ್ಲಿನ ವಾದ ಪತ್ರದ ದೃಢಿಕೃತ ನಕಲನ್ನು ನಿಪಿ-1 ಎಂದು,
- ಪ್ರತಿವಾದ ಪತ್ರದ ದೃಢಿಕೃತ ನಕಲನ್ನು ನಿಪಿ-2 ಎಂದು,
- ತೀರ್ಪು ಮತ್ತು ಡಿಕ್ರಿಯ ದೃಢಿಕೃತ ನಕಲಗಳನ್ನು ನಿಪಿ-3 ಮತ್ತು 4 ಎಂದು,
- PW-1 ರವರ ಸಾಕ್ಷಿಯ ದೃಢಿಕೃತ ನಕಲನ್ನು ನಿಪಿ-5 ಎಂದು,
- PW-2 ರವರ ಸಾಕ್ಷಿಯ ದೃಢಿಕೃತ ನಕಲನ್ನು ನಿಪಿ-6 ಎಂದು,
- PW-3 ರವರ ಸಾಕ್ಷಿಯ ದೃಢಿಕೃತ ನಕಲನ್ನು ನಿಪಿ-7 ಎಂದು,
- ದಿಃ 26-07-2001 ರಂದು ಉದಯಕುಮಾರ ರವರು ಬರೆದುಕೊಟ್ಟಿದ್ದ SPA ರ ದೃಢಿಕೃತ ನಕಲನ್ನು ನಿಪಿ-8 ಎಂದು,
- 9 ಕೈ ಪಹಣಿಗಳನ್ನು ನಿಪಿ-9 ರಿಂದ 17 ಎಂದು,
- ಅಸಲು ದಾವಾ ನಂಬರ 124/1999 ರಲ್ಲಿನ DW-1 ರವರ ಸಾಕ್ಷಿಯ ದೃಢಿಕೃತ ನಕಲನ್ನು ನಿಪಿ-18 ಎಂದು,
- DW-2 ರವರ ಸಾಕ್ಷಿಯ ದೃಢಿಕೃತ ನಕಲನ್ನು ನಿಪಿ-19 ಎಂದು,
- 8 ಕೈ ಪಹಣಿಗಳನ್ನು ನಿಪಿ-20 ರಿಂದ 27 ಎಂದು,
- ದಿಃ 24-05-1997 ರ ನೋಂದಣಿ ಇಲ್ಲದ ಪಾಲುದಾರಿಕೆ ಪತ್ರದ ದೃಢಿಕೃತ ನಕಲನ್ನು ನಿಪಿ-28 ಎಂದು,
- 1 ಕಂಪ್ಯೂಟರ ಪಹಣಿಯನ್ನು ನಿಪಿ-29 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಸೇಡಂ**